# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 9 & 15 / ಪಿಡಬ್ಲು: 5

ದಿನಾಂಕ: 07.11.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ ಲಮಾಣಿ |
| ತಂದೆಯ ಹೆಸರು | : | ಮಾನಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಹತ್ತಿಕಟ್ಟಿ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಪ್ರಾಸಾ-1 ಹಾಗೂ ಚಾಸಾ-8 ರವರು ನನಗೆ ಗೊತ್ತು. ಚಾಸಾ-10 ರಿಂದ 14 ರವರು ಗೊತ್ತು. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಗೊತ್ತು. ಮೃತ ಸೋಮಲೆಪ್ಪ ನಾಯಕ ನನಗೆ ಪರಿಚಯ ಇದ್ದರು.

2. ಈಗ ಸುಮಾರು ಎರಡು ವರ್ಷಗಳ ಹಿಂದೆ, ರಾತ್ರಿ 08.30/09.00 ಗಂಟೆ ಸಮಯದಲ್ಲಿ ಚಾಸಾ-14 ರವರು ನನಗೆ, ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿ, ನನ್ನ ಬೋಲೇರೋ ವಾಹನವನ್ನು ತರುವಂತೆ ಹೇಳಿರುತ್ತಾರೆ. ನಂತರ ನಾನು ನನ್ನ ಬೋಲೇರೋ ವಾಹನವನ್ನು ತೆಗೆದುಕೊಂಡು ಸದರಿ ಸೇವಾಲಾಲ ದೇವಸ್ಥಾನದ ಮುಂದೆ ಇರುವ ರಸ್ತೆಗೆ ಹೋಗಿದ್ದು, ಅಲ್ಲಿ ಗಾಯಗೊಂಡ ಸದರಿ ಸೋಮಲೆಪ್ಪ ನಾಯಕ ಇವರನ್ನು ನಾನು, ಚಾಸಾ-14, ಪ್ರಾಸಾ-1 ರವರು ಸೇರಿ ನನ್ನ ಬೋಲೇರೋ ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ.

3. ಸದರಿ ಸೋಮಲೆಪ್ಪ ಇವರಿಗೆ ಆರೋಪಿ ಚಾಕುವಿನಿಂದ ಅವರ ದೇಹದ ಎಲ್ಲಾ ಕಡೆಗೆ ಚುಚ್ಚಿದ್ದನು ಮತ್ತು ಇದರಿಂದಾಗಿ ಅವರ ಬಟ್ಟೆಗೆಲ್ಲಾ ರಕ್ತವಾಗಿತ್ತು. ನಂತರ ಸದರಿ ಸೋಮಲೆಪ್ಪ ನಾಯಕ ಈತನು ಮೃತಪಟ್ಟಿರುತ್ತಾನೆ ಎಂದು ನನಗೆ ಗೊತ್ತಾಯಿತು.

4. ಆರೋಪಿ ತನ್ನ ಹೆಂಡತಿಯ ಸಲುವಾಗಿ ಸದರಿ ಸೋಮಲೆಪ್ಪ ನಾಯಕ ಇವರಿಗೆ

ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ನನಗೆ ಗೊತ್ತಾಯಿತು. ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚುವಾಗ, ಚಾಸಾ-10, 12 ಮತ್ತು 13 ರವರು ಇದ್ದರು ಎಂದು ನನಗೆ ಗೊತ್ತಾಯಿತು.

5. ಹಾಗೆಯೇ ಚಾಸಾ-13 ರವರು ಆರೋಪಿಯ ಹತ್ತಿರ ಇದ್ದ ಚೂರಿಯನ್ನು ಕಸಿದುಕೊಂಡಿರುತ್ತಾರೆ ಎಂದು ನನಗೆ ಗೊತ್ತಾಯಿತು.

6. ಸುಮಾರು ಎರಡು ವರ್ಷಗಳ ಹಿಂದೆ ಪೋಲೀಸರು ಪಂಚನಾಮೆಗೆ ಬರಬೇಕೆಂದು ನನಗೆ ನೋಟೀಸನ್ನು ನೀಡಿದ್ದರು. **ಈಗ ಸದರಿ ನೋಟೀಸನ್ನು ನೋಡುತ್ತಿದ್ದು, ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.** ಆ ಪ್ರಕಾರ ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿರುತ್ತೇನೆ.

7. ಚಾಸಾ-13 ರವರು ಸದರಿ ಆರೋಪಿಯಿಂದ ಕಸಿದುಕೊಂಡ ಚೂರಿಯನ್ನು ಮುಂಡರಗಿ ಪೋಲೀಸ್ ಠಾಣೆಯಲ್ಲಿ ಹಾಜರಪಡಿಸುವಾಗ, ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ, ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ-8 ರವರು ಕೂಡಾ ಹಾಜರ ಇದ್ದರು. **ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.** ನನ್ನ ಜೊತೆಗೆ ನಿಪಿ-16 ಕ್ಕೆ ಚಾಸಾ-8 ಮತ್ತು 13 ರವರು ಕೂಡಾ ಸಹಿಗಳನ್ನು ಮಾಡಿರುತ್ತಾರೆ. ನಿಪಿ-16 ನ್ನು ಮುಂಜಾನೆ 08.30 ರಿಂದ 09.00 ಗಂಟೆಯವರೆಗೆ ಮಾಡಲಾಗಿರುತ್ತದೆ. ನಿಪಿ-16 ನ್ನು ಮುಂಡರಗಿ ಪೋಲೀಸ ಠಾಣೆಯಲ್ಲಿ ತಯಾರಿಸಲಾಗಿರುತ್ತದೆ. **ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋವನ್ನು ನಿಪಿ-17 ಎಂದು ಗುರುತಿಸಲಾಯಿತು.**

8. ಸದರಿ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸದರಿ ಚೂರಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

9. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ, ಶ್ರೀ ಸಿ. ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

10. ಯಾವ ತಾರೀಖಿನಂದು ಪೋಲೀಸರು ನನಗೆ ನೋಟೀಸನ್ನು ಕೊಟ್ಟಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಪೋಲೀಸರು ನನಗೆ ನಿಪಿ-15 ನ್ನು ಕೊಟ್ಟ ಎರಡು ದಿನಕ್ಕೆ ನಾನು ಪೋಲೀಸ ಠಾಣೆಗೆ ಹೋಗಿರುತ್ತೇನೆ. ನಾನು ಪೋಲೀಸ ಠಾಣೆಗೆ ಹೋದಾಗ, ಪೋಲೀಸರು ನನ್ನ ಒಂದು

ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿ-15 ನ್ನು ನನಗೆ ಕೊಡಲು ಪೋಲೀಸರು ಬಂದಿದ್ದರು ಮತ್ತು ಅದನ್ನು ಹತ್ತಿಕಟ್ಟಿ ಗ್ರಾಮದಲ್ಲಿ ಕೊಟ್ಟಿರುತ್ತಾರೆ.

11. ಫೋಟೋವನ್ನು ತೆಗೆಯುವಾಗ, ನಾವು ಪೂರ್ವಾಭಿಮುಖವಾಗಿ ನಿಂತುಕೊಂಡಿದ್ದೆವು. ಮು.ಮಾ.1 ರಂತಹ ಚೂರಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮು.ಮಾ.1 ನ್ನು ನಾನು ಮೊದಲಿಗೆ ಪೋಲೀಸ ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿ. ಮು.ಮಾ.1 ನ್ನು ಪೋಲೀಸ ಠಾಣೆಗೆ ಚಾಸಾ-13 ರವರು ತಂದಿದ್ದಾರೆ.

12. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸ ಠಾಣೆಗೆ ಒಂದು ಸಾರಿ ಹೋಗಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ನಾನು ಏನನ್ನೂ ಹೇಳಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ನನ್ನ ಬೋಲೇರೋ ವಾಹನದ ನಂಬರನ್ನು ಹೇಳಿ ಬರೆಸಿರುವುದಿಲ್ಲ. ಬೋಲೇರೋ ವಾಹನದ ನಂಬರನ್ನು ನನಗೆ ಹೇಳಲು ಆಗುವುದಿಲ್ಲ.

13. ನಾನು ಆ ದಿನ ನನ್ನ ಬೋಲೇರೋ ವಾಹನವನ್ನು ತೆಗೆದುಕೊಂಡು ಹೋಗಿರುವುದಿಲ್ಲ ಮತ್ತು ಆದ್ದರಿಂದ ನನಗೆ ಅದರ ನಂಬರನ್ನು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

14. ನಾನು ಕಳೆದ 10 – 15 ವರ್ಷಗಳಿಂದ ಗೋವಾದಲ್ಲಿ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಗೋವಾದಲ್ಲಿ ವಾಸವಾಗಿರುವುದರಿಂದ ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಮತ್ತು ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇರದೇ ಇದ್ದರೂ ಕೂಡಾ ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಪೋಲೀಸ ಠಾಣೆಯಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-16 ನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ನೆನಪಿರುವುದಿಲ್ಲ. ನಿಪಿ-16 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯ ಕುಟುಂಬದ ಬಗ್ಗೆ ನನಗೆ ವೈಯಕ್ತಿಕ ಮಾತಿಹಿ ಇರುವುದಿಲ್ಲ.

16. ಸುಮಾರು ಎರಡು ವರ್ಷಗಳ ಹಿಂದೆ, ರಾತ್ರಿ 08.30/09.00 ಗಂಟೆ ಸಮಯದಲ್ಲಿ ಚಾಸಾ-14 ರವರು ನನಗೆ, ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿ, ನನ್ನ ಬೋಲೇರೋ ವಾಹನವನ್ನು ತರುವಂತೆ ಹೇಳಿರುತ್ತಾರೆ ಮತ್ತು ನಂತರ ನಾನು ನನ್ನ ಬೋಲೇರೋ ವಾಹನವನ್ನು ತೆಗೆದುಕೊಂಡು ಸದರಿ ಸೇವಾಲಾಲ ದೇವಸ್ಥಾನದ ಮುಂದೆ ಇರುವ ರಸ್ತೆಗೆ ಹೋಗಿದ್ದು, ಅಲ್ಲಿ ಗಾಯಗೊಂಡ ಸದರಿ

ಸೋಮಲೆಪ್ಪ ನಾಯಕ ಇವರನ್ನು ನಾನು, ಚಾಸಾ-14, ಪ್ರಾಸಾ-1 ರವರು ಸೇರಿ ನನ್ನ ಬೋಲೇರೋ



ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಸದರಿ ಸೋಮಲೆಪ್ಪ ಇವರಿಗೆ ಆರೋಪಿ ಚಾಕುವಿನಿಂದ ಅವರ ದೇಹದ ಎಲ್ಲಾ ಕಡೆಗೆ ಚುಚ್ಚಿದ್ದನು ಮತ್ತು ಇದರಿಂದಾಗಿ ಅವರ ಬಟ್ಟೆಗೆಲ್ಲಾ ರಕ್ತವಾಗಿತ್ತು ಮತ್ತು ನಂತರ ಸದರಿ ಸೋಮಲೆಪ್ಪ ನಾಯಕ ಈತನು ಮೃತಪಟ್ಟಿರುತ್ತಾನೆ ಎಂದು ನನಗೆ ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಆರೋಪಿ ತನ್ನ ಹೆಂಡತಿಯ ಸಲುವಾಗಿ ಸದರಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಮತ್ತು ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚುವಾಗ, ಚಾಸಾ-10, 12 ಮತ್ತು 13 ರವರು ಇದ್ದರು ಮತ್ತು ಚಾಸಾ-13 ರವರು ಆರೋಪಿಯ ಹತ್ತಿರ ಇದ್ದ ಚೂರಿಯನ್ನು ಕಸಿದುಕೊಂಡಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಸುಮಾರು ಎರಡು ವರ್ಷಗಳ ಹಿಂದೆ ಪೋಲೀಸರು ಪಂಚನಾಮೆಗೆ ಬರಬೇಕೆಂದು ನನಗೆ ನೋಟೀಸನ್ನು ನೀಡಿದ್ದರು ಮತ್ತು ಆ ಪ್ರಕಾರ ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿರುತ್ತೇನೆ ಮತ್ತು ಚಾಸಾ-13 ರವರು ಸದರಿ ಆರೋಪಿಯಿಂದ ಕಸಿದುಕೊಂಡ ಚೂರಿಯನ್ನು ಮುಂಡರಗಿ ಪೋಲೀಸ್ ಠಾಣೆಯಲ್ಲಿ ಹಾಜರಪಡಿಸುವಾಗ, ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ, ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಮತ್ತು ಆ ಸಮಯದಲ್ಲಿ ಚಾಸಾ-8 ರವರು ಕೂಡಾ ಹಾಜರ ಇದ್ದರು ಮತ್ತು ನನ್ನ ಜೊತೆಗೆ ನಿಪಿ-16 ಕ್ಕೆ ಚಾಸಾ-8 ಮತ್ತು 13 ರವರು ಕೂಡಾ ಸಹಿಗಳನ್ನು ಮಾಡಿರುತ್ತಾರೆ ಮತ್ತು ನಿಪಿ-16 ನ್ನು ಮುಂಜಾನೆ 08.30 ರಿಂದ 09.00 ಗಂಟೆಯವರೆಗೆ ಮಾಡಲಾಗಿರುತ್ತದೆ ಮತ್ತು ನಿಪಿ-16 ನ್ನು ಮುಂಡರಗಿ ಪೋಲೀಸ ಠಾಣೆಯಲ್ಲಿ ತಯಾರಿಸಲಾಗಿರುತ್ತದೆ ಮತ್ತು ಆ ಸಮಯದಲ್ಲಿ ನಿಪಿ-17 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**